ಬೇರೊಂದು ಚಪ್ಪಲಿ ಇರುವುದು. ಊರಿಗೆ ಹೋಗುವಾಗ ಒಂದು ಚಪ್ಪಲಿ, ತೋಟಕ್ಕೆ ಹೋಗುವಾಗ ಮತ್ತೊಂದು ಚಪ್ಪಲಿ ಇಟ್ಟುಕೊಳ್ಳುವ ಅಪ್ಪತ್ತಾ ಮಳೆಗಾಲಕ್ಕೆ ಮನೆಯೊಳಗೆ ಹಾಕಿಕೊಳ್ಳಲು ಇನ್ನೊಂದು ಚಪ್ಪಲಿ ಇಟ್ಟುಕೊಂಡಿರುವುದನ್ನೂ ನೋಡಿದ್ದೇನೆ. ಅಮ್ಮನಿಗೆ ಮಾತ್ರ ಒಂದೇ ಚಪ್ಪಲಿ. ಅದೂ ಸಹ ಅಡುಗೆಗೆ ಸೌದೆ ಕಡಿಯಲು ಹೋಗುವಾಗ, ಅದರಲ್ಲೂ ಸೀಮೇಕರಿಬೇಲದ ಮುಳ್ಳನ್ನು ಕಡಿಯಲು ಹೋಗುವಾಗ. ಮತ್ತೆ ಊರಿಗೆ ಹೋಗುವಾಗ. ಅಷ್ಟೇ. ಎಷ್ಟೇ ಮುಳ್ಳು ತುಂಬಿದ ಹಾದಿಯಾದರೂ ಗದ್ದೆ ಬದಿಗಳಲ್ಲಿ ನಡೆಯುವಾಗ ಚಪ್ಪಲಿ ಹಾಕಿಕೊಳ್ಳುವುದಿಲ್ಲ. ಕೂಡದು. ಹಾಗೆ ಹಾಕಿಕೊಂಡು ಹೋಗುವ ಸಮಯದಲ್ಲಿ ಕಳಚಿ ಕೈಯಲ್ಲಿ ಎತ್ತಿ ಹಿಡಿದುಕೊಂಡು ನಡೆಯುವಳು. ಕೇಳಿದರೆ 'ಗುಡಿ, ಮನೆಗಿಂತ ಪವಿತ್ರವಾದ ಸ್ಥಳ ಗದ್ದೆ. ಅದಲ್ಲವೇ ನಮಗೆ ಅನ್ನ ಕೊಡುವ ದೇವರು' ಎಂದು ಉತ್ತರಿಸುವಳು. ಅಮ್ಮ ಗುಡಿಗೆ ಬಹಳವಾಗಿ ಹೋಗುವುದಿಲ್ಲ. ಆದರೆ, ಗದ್ದೆಗೆ ಹೋಗದೆ ಇದ್ದದ್ದೇ ಇಲ್ಲ. ಗದ್ದೆಯಲ್ಲಿ ನಮಗೆ ಬಾವಿಯಿಲ್ಲ. ಅಪ್ಪತ್ತಾ ಮನೆಯವರಿಗೆ ಬಾವಿಗಳಿವೆ ಎಂದು ಅಮ್ಮ ಒಮ್ಮೆ ಹೇಳಿರುವಳು.

ಶೆಂಬಾಯಿಅಪ್ಪತ್ತಾ ತೋಟದಲ್ಲಿ ನನಗೆ ಇಣಕಿ ನೋಡುವ ಬಾವಿ ಮುಖ್ಯವಾದದ್ದು. ಅದೇ ಎಲ್ಲ ತೋಟದ ಹಸಿರಿಗೂ ಜೀವ ತುಂಬಿ ತಂಪೆರೆದು ಅನುಗ್ರಹಿಸುವುದು. ಈ ತಂಪು ತರುವುದಕ್ಕಾಗಿಯೇ ಇದನ್ನು ತಣ್ಣೀರು ಎನ್ನುತ್ತೇವೋ ಎಂದು ಅಂದುಕೊಳ್ಳುವುದುಂಟು. ನಿಜ ಹೇಳುವುದಾದರೆ ಶೆಂಬಾಯಿಅಪ್ಪಾತ್ತಾರ ಮನೆಯ ತೋಟದ ಬಾವಿ ಹಸಿರಾಗೆ ಇರುವುದು. ಮೋಟಾರು ಹಾಕಿ ಸೇದಿ ತೊಟ್ಟಿಯಲ್ಲಿ ತುಂಬಿಕೊಂಡ ನೀರು ಹಾಗೆಯೇ. ಆದರೆ, ಮೋಟಾರು ಪೈಪಿನಿಂದ ಸುರಿವ ನೀರು ಎಲ್ಲ ನೀರಿನಂತೆ ಬಿಳಿಯಾಗೇ ಇರುವುದು. ಅದರಲ್ಲಿ ಒಮ್ಮೆಯಾದರೂ ಸ್ನಾನ ಮಾಡಬೇಕೆಂಬ ಸಣ್ಣ ಆಸೆಯೊಂದು ಆಗಾಗ ಇಣುಕಿ ಹಾಕುವುದು. ಸ್ನಾನ ಮಾಡುವ ಸಮಯಕ್ಕೆ ನಾನೆಂದೂ ಶೆಂಬಾಯಿಅಪ್ಪತ್ತಾರ ಮನೆಗೆ ಹೋಗಲಿಲ್ಲ. ಮತ್ತೆ ಅಪ್ಪತ್ತಾ ಕೂಡ ಇದರಲ್ಲಿ ಸ್ನಾನ ಮಾಡುವುದಿಲ್ಲ. ಅವರಿಗೆ ಸ್ನಾನ ಮಾಡಲು, 'ಹಿತ್ತಲಿ'ಗೆ ಹೋಗಲು ಬೇರೆಬೇರೆ ಕೋಣೆಗಳಿದ್ದವು. ಅವುಗಳ ಒಳಗೆ ನಾನು ಹೋಗಿರಲಿಲ್ಲ. ಹೋಗಬೇಕಾದ ಅವಶ್ಯಕತೆಯೂ ಇರಲಿಲ್ಲ.

ತುಂಬ ಸಮಯ ಶೆಂಬಾಯಿಅಪ್ಪತ್ತಾರ ಮನೆಯಲ್ಲಿ ಇರಲು ಸಾಧ್ಯವಿಲ್ಲ. 'ಸರಿ, ಸರಿ ಸಮಯವಾಯ್ತು, ನೀನು ಕಾಣಲಿಲ್ಲವೆಂದು ನಿನ್ನಮ್ಮ ನನ್ನನ್ನು ಬೈಯುತ್ತಾಳೆ, ಹೊರಡು' ಎಂದು ನನ್ನನ್ನು ಹೊರಡಿಸುವಳು. ಹೋಗುವಾಗ ಪರ್ಸನ್ನು ತೆರೆಯುವರು. ನೋಡದಂತೆ ಹೊರಡುವೆನು. ಶೆಂಬಾಯಿಅಪ್ಪತ್ತಾ ಬಳಿ ಕೈನೀಡಿ ಏನನ್ನೂ ತೆಗೆದುಕೊಳ್ಳಬಾರದೆಂಬುದು ಅಮ್ಮನ ಕಟ್ಟಳೆ. ಇದನ್ನು ಹೇಗೆ ಶೆಂಬಾಯಿಅಪ್ಪತ್ತಾ ತಿಳಿದುಕೊಂಡಿದ್ದರೋ ತಿಳಿಯದು. ಪರ್ಸ್ ಮುಚ್ಚಿಕೊಳ್ಳುವುದು. ಅವರು ಹಲವು ಊರುಗಳಿಗೆ ಹೋಗುವಾಗ ಹಲವರಿಗೆ ಹಣ ಕೊಡುವುದುಂಟು ಎಂದು ಅಮ್ಮ ಹೇಳಿದ್ದು ನೆನಪಿಗೆ ಬರುವುದು. 'ಆದರೆ ನಾವು ತೆಗೆದುಕೊಳ್ಳಕೂಡದು. ಕೀಳಾಗಿ ಕಾಣುತ್ತಾರೆ' ಎಂದು ಎಲ್ಲೋ ನೋಡಿಕೊಂಡು ಸಹಜವಾಗಿ, ಬುದ್ಧಿವಾದದಂತೆ ಅಮ್ಮ ಹೇಳುವ ಮಾತುಗಳು ನನ್ನ ಮುಖ ನೋಡಿ ಅಲ್ಲ, ಯಾರಿಗೋ ಹೇಳುವಂತೆ ಇರುವುದು. ಆ ರೀತಿ ಹೇಳುವ ಸಂದರ್ಭ ಬರಕೂಡದೆಂದು ಅಮ್ಮ ಅಂದುಕೊಂಡಿರಬಹುದು. ಆದರೆ ಶಂಬಾಯಿಅಪ್ಪತ್ತಾ ಹಾಗಲ್ಲ, ಕೈಗಳನ್ನು ಹಿಡಿದುಕೊಂಡು, ಕಣ್ಣುಗಳನ್ನು ನೋಡಿಯೇ ಎಲ್ಲವನ್ನೂ ಹೇಳುವರು. ಸಣ್ಣ ದನಿಯಲ್ಲಿ ನನ್ನ ಹೆಸರನ್ನು ನಡುನಡುವೆ ಹೇಳುವರು. ಮುದ್ದುಭಾಷೆಯ ಸಿಹಿಯಾದ ಮಾತುಗಳಲ್ಲಿ ಹೇಳಿದ್ದೆಲ್ಲವೂ ಮರೆತುಹೋಗುವುದು.